

# ‘ಸ್ಪಾಟ್‌ಲೈಟ್’ನಲ್ಲಿ ತೇಜಸ್ವಿನಿ

‘ಮೇರಿ’, ‘ಇಂಗ್ಲಿಷ್ ಮಂಜ’ ಸಿನಿಮಾಗಳಲ್ಲಿ ನಟಿಸಿರುವ ನಟಿ ತೇಜಸ್ವಿನಿ ಶರ್ಮಾ ‘ವಿಐಪಿ’ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇದೇ ಸಂದರ್ಭ, ಕನ್ನಡ ಸಿನಿಮಾಗಳಲ್ಲಿ ನಟಿಯರ ಪ್ರಾತಿನಿಧ್ಯದ ಕುರಿತು ಮಾತನಾಡಿದ್ದಾರೆ.

‘ಕನ್ನಡ ಸಿನಿಮಾರಂಗದಲ್ಲಿ ನಟಿಯರಿಗೆ ಸಂಬಂಧಿಸಿದಂತೆ ಹೊಸ ಅಲೆ ಕಂಡುಬರುತ್ತಿದೆ. ನಿಧಾನವಾಗಿ ಸ್ಪಾಟ್‌ಲೈಟ್ ಹೀರೊಯಿನ್‌ಗಳ ಮೇಲೆ ಬೀಳುತ್ತಿದೆ’ ಎಂದು ಹೇಳಿದ್ದಾರೆ. ‘ಪ್ರಸ್ತುತ ಮಹಿಳಾಧಾರಿತ ಸಿನಿಮಾಗಳು ಮೂಡಿಬರುತ್ತಿವೆ. ಹೀರೊಯಿನ್‌ಗಳನ್ನು ಗಟ್ಟಿ ಪಾತ್ರವಾಗಿ ತೋರಿಸುವಂಥ ಸಿನಿಮಾಗಳು ಬರುತ್ತಿವೆ. ಇದರ ಬಗ್ಗೆ ಬಹಳ ಖುಷಿಯಿದೆ’ ಎಂದಿದ್ದಾರೆ.

‘ಇಷ್ಟಕ್ಕೇ ಖುಷಿಪಡುವಂತಿಲ್ಲ. ಸಾಗಬೇಕಾದ ಹಾದಿ ಇನ್ನೂ ಇದೆ. ಈ ಬದಲಾವಣೆ ಆರಂಭವಾಗಿದೆ ಎನ್ನುವುದು ಪಾಸಿಟಿವ್ ಅಂಶ. ಅತಿ ಶೀಘ್ರದಲ್ಲಿ ನಾವು ಇನ್ನಷ್ಟು ಬದಲಾವಣೆಗಳನ್ನು ನಿರೀಕ್ಷಿಸೋಣ’ ಎಂದು ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

ಸಿನಿಮಾಗಳ ವಿಷಯಕ್ಕೆ ಬಂದರೆ, ತಾವು ಪ್ರಾಜೆಕ್ಟ್ ಆಯ್ಕೆ ಮಾಡಿಕೊಳ್ಳುವ ಮುನ್ನ ತುಂಬಾ ಯೋಚಿಸುವುದಾಗಿ ಹೇಳುತ್ತಾರೆ.

‘ನಾನು ಯಾವಾಗಲೂ ಸಂಪೂರ್ಣ ಕಥೆಯನ್ನು ತಾಳ್ಮೆಯಿಂದ ಕೇಳಿಸಿಕೊಳ್ಳುತ್ತೇನೆ. ನಿರ್ದೇಶಕರು ನನ್ನ ಪಾತ್ರದ ಬಗ್ಗೆ ಎಷ್ಟು ಸ್ಪಷ್ಟತೆ ಹೊಂದಿದ್ದಾರೆ ಎಂಬುದನ್ನು ತಿಳಿದುಕೊಳ್ಳುತ್ತೇನೆ. ಆ ಪಾತ್ರದ ಜೀವಾಳ ನನಗೆ ತುಂಬಾ ಮುಖ್ಯ. ಕ್ಲೀಷೆಯ ಪಾತ್ರಗಳನ್ನು ದೂರವಿರಿಸುತ್ತೇನೆ. ನಂಬರ್‌ಗಿಂತ ನನಗೆ ಗುಣಮಟ್ಟದಲ್ಲಿ ಹೆಚ್ಚು ನಂಬಿಕೆ. ಇದನ್ನೇ ನಾನು ಯಾವಾಗಲೂ ಬಯಸುವುದು’ ಎಂದಿದ್ದಾರೆ.

# ಪ್ರಯೋಗಾತ್ಮಕ ‘ಪೃಥ್ವಿ’



‘ದಿಯಾ’ ಸಿನಿಮಾ ನಂತರ ಜನಪ್ರಿಯತೆಯ ಹಾದಿಯಲ್ಲಿ ಸಾಗುತ್ತಿರುವ ನಟ ಪೃಥ್ವಿ ಅಂಬಾರ್‌ಗೆ ಈ ವರ್ಷ ಭರವಸೆಯ ವರ್ಷವೂ ಆದಂತಿದೆ. ವರ್ಷದ ಎರಡನೇ ತಿಂಗಳಿನಲ್ಲಿಯೇ ಅವರ ಮೂರು ಸಿನಿಮಾಗಳು ತೆರೆಕಾಣುತ್ತಿವೆ. ಈಚೆಗೆ ಅವರ ನಟನೆಯ ‘ಜೂನಿ’ ತೆರೆಕಂಡಿದ್ದು, ಫೆ. 23ರಂದು ‘ಫಾರ್ ರಿಜಿಸ್ಟ್ರೇಷನ್’ ಬಿಡುಗಡೆಗೆ ಸಜ್ಜಾಗಿದೆ. ‘ಮತ್ಸ್ಯಗಂಧ’ ಕೂಡ ರಿಲೀಸ್ ಲಿಸ್ಟ್‌ನಲ್ಲಿದೆ. ಈ ಎಲ್ಲಾ ಸಿನಿಮಾಗಳು ತಮಗೆ ಅದೃಷ್ಟ ಪರೀಕ್ಷೆ ಒಡ್ಡಿದ್ದು, ಜನರು ಹೇಗೆ ಸಿನಿಮಾ ಸ್ವೀಕರಿಸುತ್ತಾರೆ ಎಂಬ ನಿರೀಕ್ಷೆಯೂ ಅವರಲ್ಲಿ ತುಂಬಿಕೊಂಡಿದೆ.

ಪ್ರಯೋಗಾತ್ಮಕ ಪಾತ್ರಗಳ ಬಗ್ಗೆ ಒಲವಿಟ್ಟುಕೊಂಡಿರುವ ಪೃಥ್ವಿ ಅವರಿಗೆ, ಬಾಕ್ಸ್ ಆಫೀಸ್ ಗಳಿಕೆಗಿಂತ ಕಥೆಯ ತಿರುಳು ಹಾಗೂ ಪ್ರೇಕ್ಷಕರ ಮನ ತಟ್ಟುವುದು ಬಹಳ ಮುಖ್ಯವಂತೆ. ಒಳ್ಳೆಯ ಕಥೆಗಳನ್ನು, ಹೊಸತನಕ್ಕೆ ಒಡ್ಡುವ ಪಾತ್ರಗಳನ್ನು ಮಾಡುವುದೇ ಗುರಿ ಎನ್ನುತ್ತಾರೆ.

‘ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ಸಿನಿಮಾ ‘ಜೂನಿ’ ಆದರೆ, ‘ಮತ್ಸ್ಯಗಂಧ’ ನಮ್ಮ ಮಣ್ಣಿನ ಕಥೆ. ಈ ಸಿನಿಮಾದಲ್ಲಿ ನಾನು ಮೊದಲ ಬಾರಿ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಗಿರೀಶ್ ನಿರ್ದೇಶನದ ‘ಭುವನಂ ಗಗನಂ’ ಸಿನಿಮಾ ಹಾಗೂ ನಾಗತಿಹಳ್ಳಿ ಚಂದ್ರಶೇಖರ್ ಅವರ ಹೊಸ ಪ್ರಾಜೆಕ್ಟ್‌ನಲ್ಲಿ ನಟಿಸುತ್ತಿದ್ದೇನೆ. ಮಂಗಳೂರು ಮೂಲದ ನಿರ್ಮಾಪಕ ಹರಿಪ್ರಸಾದ್ ಅವರ ಜೊತೆ ಹೊಸ ಸಿನಿಮಾದ ಮಾತುಕತೆ ನಡೆಯುತ್ತಿದೆ’ ಎಂದು ತಮ್ಮ ಅಭಿನಯದ ಇನ್ನಷ್ಟು ಸಿನಿಮಾಗಳ ಕುರಿತು ಸಂತಸ ವ್ಯಕ್ತಪಡಿಸಿದರು.